# ಎನ್ಐಟಿಕೆ ಸುರತ್ಕಲ್: 'ರಾಷ್ಟ್ರ ಮೊದಲು' ಅಭಿಯಾನ



**ಸುರತ್ಕಲ್, ಮೇ 19:** ಭಾರತ ಸರಕಾರದ ಶಿಕ್ಷಣ ಸಚಿವಾಲಯದ ಮಾರ್ಗದರ್ಶನ, ಸೂಚನೆಯ ಮೇರೆಗೆ ಕರ್ನಾಟಕ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಸುರತ್ಕಲ್ ವತಿಯಿಂದ 'ರಾಷ್ಟ್ರ ಮೊದಲು' ಎಂಬ ಅಭಿಯಾನ ನಡೆಯಿತು.

ಕಾರ್ಯಕ್ರಮದಲ್ಲಿ 2 ಕಾರ್ ಎಂಜಿನಿಯರ್ ಕೊಯ್ ಎನ್‌ಸಿಸಿಯ ಕ್ಯಾ। ಪ್ರೊಫೆಸರ್ ಪಿ. ಸ್ಯಾಮ್ ಜಾನ್ಸನ್ ಅವರು 'ನಿಮ್ಮ ಸೈನ್ಯವನ್ನು ತಿಳಿದುಕೊಳ್ಳಿ' ಎಂಬ ವಿಷಯದ ಕುರಿತು ಮಾತನಾಡಿ, ದೇಶದ ಗಡಿಯನ್ನು ರಕ್ಷಿಸುವ ಸೈನಿಕರಿಗೆ ನಾವೆಲ್ಲಾ ಗೌರವದ ಜತೆಗೆ ಏಕತೆಯಿಂದ ನೈತಿಕ ಸ್ಥೈರ್ಯ ತುಂಬುವ ಕೆಲಸ ಮಾಡಬೇಕು ಎಂದರು.

ದೇಶಭಕ್ತಿ, ರಾಷ್ಟ್ರೀಯ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರದ ಕುರಿತು ಪ್ರತಿಬಿಂಬಿಸುವ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು. ರಾಷ್ಟ್ರಧ್ವಜದೊಂದಿಗೆ ನಡೆದ ಮೆರವಣಿಗೆಯಲ್ಲಿ ಸಂಸ್ಥೆಯ ನಿರ್ದೇಶಕ ಪ್ರೊ। ರವಿ, ಡೀನ್, ಉಪನ್ಯಾಸಕರು, ಸಿಬಂದಿ ಮತ್ತು ವಿದ್ಯಾರ್ಥಿಗಳು 'ರಾಷ್ಟ್ರ ಮೊದಲು' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

Udayavani, Date: 20/05/25, p, no - 04_Sudina